ಅ) ತೋಟಗಾರಿಕೆ ಇಲಾಖೆಯಲ್ಲಿ ಒಂದು ಲಕ್ಷ ಐವತ್ತೆಂಟು ಸಾವಿರದ ಬೀಜದ ತೆಂಗಿನ ಕಾಯಿಗಳನ್ನು ಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಇದನ್ನು ಎಂದು ಕೊಳ್ಳಲಾಯಿತು ಹಾಗೂ ಇದಕ್ಕಾಗಿ ತಗುಲಿದ ವೆಚ್ಚವೆಷ್ಟು?

ಆ) ಬೀಜದ ಕಾಯಿಗಳನ್ನು ನವೆಂಬರ್, ಡಿಸೆಂಬರ್ ಮತ್ತು ಜನವರಿಯಲ್ಲಿ ಕೊಳ್ಳಬೇಕಾಗಿದ್ದು ಜೂನ್ ಮತ್ತು ಜುಲೈ ತಿಂಗಳಲ್ಲಿ ಕೊಳ್ಳಲು ಕಾರಣವೇನು?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು)

ಅ) ಇಲ್ಲ. ಆದರೆ 1990-91ನೇ ಸಾಲಿನಲ್ಲಿ ಒಟ್ಟು 9,13,898 ಬೀಜದ ತೆಂಗಿನ ಕಾಯಿಗಳನ್ನು ಅಕ್ಟೋಬರ್ ನವೆಂಬರ್, ಡಿಸೆಂಬರ್ ಮತ್ತು ಜನವರಿ 1991 ಅವಧಿಯಲ್ಲಿ ಮಾತ್ರ ಕೊಳ್ಳಲಾಗಿದೆ. ವೆಚ್ಚ ರೂ. 35.19 ಲಕ್ಷಗಳು.

ಆ) ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಕೊಂಡಿಲ್ಲವಾದ್ದರಿಂದ ಕಾರಣಗಳನ್ನು ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಉಪ-ನೋಂದಣಿ ಅಧಿಕಾರಿಗಳ ಸಂಖ್ಯೆ

3645 - ಶ್ರೀ ಗೋಪಾಲ ಮುಕುಂದ ಕಾನಡೆ (ಸಿರಸಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿರುವ ನೋಂದಣಿ ಅಧಿಕಾರಿಗಳ ಸಂಖ್ಯೆ ಎಷ್ಟು? ಇವರಲ್ಲಿ ಹರಿಜನ-ಗಿರಿಜನ ವರ್ಗಕ್ಕೆ ಸೇರಿದವರ ಸಂಖ್ಯೆ ಎಷ್ಟು?

ಆ) ಇವರಲ್ಲಿ ಜಿಲ್ಲಾ ಹೆಡ್ ಕ್ವಾರ್ಟರ್ಸ್‌ನಲ್ಲಿ ಎಷ್ಟು ಮಂದಿ ಹರಿಜನ ನೋಂದಣಿ ಅಧಿಕಾರಿಗಳು ಇದ್ದಾರೆ. ಹಾಗೂ ಅವರ ಹೆಸರು ಪೂರ್ತಿ ವಿವರ ಒದಗಿಸುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 228 ಅವರಲ್ಲಿ, ಪರಿಶಿಷ್ಟ ಜಾತಿ 32, ಪರಿಶಿಷ್ಟವರ್ಗಕ್ಕೆ ಸೇರಿದವರು 3. ಒಟ್ಟು 35.

ಆ) 8.

<u>ಶ್ರೀಯುತರಾದ</u> :

1) ಕೆ.ನರಸಪ್ಪ
2) ಎಲ್.ಎಲ್. ನಾಯಕ್ ಬೆಂಗಳೂರು
3) ಹೊಂಬಾಳಯ್ಯ
4) ಮುದ್ದುರಂಗಯ್ಯ
5) ಬಿ.ವೈ. ಫುಲೇಕರ್ ಬೀದರ್
6) ರಾಮಚಂದ್ರನಾಯಕ್ ಚಿಕ್ಕಮಗಳೂರು
7) ಬೋರಪ್ಪ ಹಾಸನ
8) ಬಿ.ವೈ. ಮುಧೋಳ್ ಬೆಂಗಳೂರು

ಬೀದರ್ ಜಿಲ್ಲೆಯಲ್ಲಿರುವ ಚಿಲ್ಲಿಂಗ್ ಪ್ಲಾಂಟ್‌ಗಳ ಸಂಖ್ಯೆ

2524 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಪಶುಸಂಗೋಪನಾ ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?